2044(3289) ಶ್ರೀ ಬಾಲರಾಜ್ ಎಸ್. (ಮಾಗಡಿ): ಮಾನ್ಯ ಅಲ್ಪಸಂಖ್ಯಾತ ಕಲ್ಯಾಣ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರಕ್ಕೆ ಸೇರಿದ ಯಳಚಿದೂರು ಮತ್ತು ಕೊಳ್ಳೇಗಾಲ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಬಂದಿದ್ದಲ್ಲಿ, ಕ್ರೀಡಾಂಗಣ ನಿರ್ಮಿಸಲು ಕೈಗೊಳ್ಳುವ ಕ್ರಮವೇನು?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಯುವಜನ ಸೇವಾ ಹಾಗೂ ಸಚಿವರು):

ಅ) ಹೌದು, ಬಂದಿದೆ.

ಆ) ಕೊಳ್ಳೇಗಾಲ ತಾಲ್ಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ಸಂಬಂಧಿಸಿದಂತೆ, ರೂ.60.00 ಲಕ್ಷಗಳ ಅಂದಾಜು ವೆಚ್ಚದ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ. ಯಳಚಿದೂರು ಕ್ರೀಡಾಂಗಣ ನಿರ್ಮಾಣಕ್ಕೆ ಅಗತ್ಯ ನಿವೇಶನವು ಲಭಿಸಿರುವುದಿಲ್ಲ.

ಇ) ವಿವಿಧ ಮೂಲಗಳಿಂದ ಹಣ ಕ್ರೋಢೀಕರಿಸಿದ ತಕ್ಷಣ ಕ್ರೀಡಾಂಗಣ ನಿರ್ಮಾಣ ಕೆಲಸ ಪ್ರಾರಂಭಿಸಲಾಗುವುದು.

2045(3290) ಶ್ರೀ ಬಾಲರಾಜ್ ಎಸ್. (ಮಾಗಡಿ): ಮಾನ್ಯ ಕಾರ್ಮಿಕ ಹಜ್ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರದಲ್ಲಿ ಇ.ಎಸ್.ಐ. ಆಸ್ಪತ್ರೆ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ;

ಆ) ಜಿಲ್ಲೆಯಲ್ಲಿಯೇ ಅತೀ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಕೊಳ್ಳೇಗಾಲ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಸೌಲಭ್ಯಗಳನ್ನು ದೊರಕಿಸಿಕೊಡಲಾಗಿದೆ;

ಇ) ಮುಂದಿನ ಕಾರ್ಯಯೋಜನೆಯ ವಿವರಗಳೇನು?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು):

ಅ) ಪ್ರಸ್ತುತ ಕೊಳ್ಳೇಗಾಲದಲ್ಲಿ ಒಂದು ಕಾರಾವಿ ಚಿಕಿತ್ಸಾಲಯವು ಕಾರ್ಯ ನಿರ್ವಹಿಸುತ್ತಿದೆ. ಕಾರಾವಿ ನಿಗಮದ ನಾರಮ್ಸ್ ಪ್ರಕಾರ ಕನಿಷ್ಠ 50,000 ಕಾರ್ಮಿಕರು ಇರುವ ಸ್ಥಳಗಳಲ್ಲಿ ಮಾತ್ರ ಕಾರಾವಿ ಆಸ್ಪತ್ರೆಯನ್ನು ಪ್ರಾರಂಭಿಸಲು ಅವಕಾಶವಿದ್ದು, ಕೊಳ್ಳೇಗಾಲದಲ್ಲಿ ಕೇವಲ 140 ವಿಮಾದಾರರು ಇರುವುದರಿಂದ ಇಎಸ್ಐ ಆಸ್ಪತ್ರೆಯನ್ನು ಪ್ರಾರಂಭಿಸುವ ಉದ್ದೇಶವಿರುವುದಿಲ್ಲ.

ಆ) ಕಾರಾವಿ ಯೋಜನೆಯ ವ್ಯಾಪ್ತಿಗೆ ಕೇವಲ 140 ಕಾರ್ಮಿಕರು ಒಳಪಟ್ಟಿದ್ದು, ಇವರಿಗೆ ಈ ಕೆಳಕಂಡ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಗಿದೆ.

1) ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಗಿದೆ.

2) ಚಿಕಿತ್ಸಾಲಯಕ್ಕೆ ಅವಶ್ಯಕವಿರುವ ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

3) ಕೊಳ್ಳೇಗಾಲದ ವಿಮಾದಾರರಿಗೆ ಉತ್ಕೃಷ್ಟ ಸೌಲಭ್ಯವನ್ನು ಒದಗಿಸಲು ಮೈಸೂರಿನ ಖಾಸಗಿ ಆಸ್ಪತ್ರೆಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.

ಇ) ಕಾರಾವಿ ನಿಗಮದ ಮಾರ್ಗಸೂಚಿಯನುಸಾರ 3000 ಕ್ಕಿಂತ ಕಡಿಮೆ ವಿಮಾದಾರರನ್ನು ಹೊಂದಿರುವ ಕಾರಾವಿ ಚಿಕಿತ್ಸಾಲಯಗಳನ್ನು ಪುನರ್ ಸಂಘಟಿಸಬೇಕಾಗಿದ್ದು ಕೊಳ್ಳೇಗಾಲದಲ್ಲಿ ಕಡಿಮೆ ವಿಮಾದಾರರು ಇರುವುದರಿಂದ ಇನ್ಸೂರೆನ್ಸ್ ಮೆಡಿಕಲ್ ಪ್ರಾಕ್ಟೀಷನರ್ ಪದ್ಧತಿಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ.

2046(3291) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆ ವ್ಯಾಪ್ತಿಗೆ ಬರುವ ಅರಣ್ಯಗಳ ಒಟ್ಟು ವಿಸ್ತೀರ್ಣ ಎಷ್ಟು;

ಆ) ಅರಣ್ಯವೆಂದು ಗುರುತಿಸಲಾದ ಒತ್ತುವರಿ ಪ್ರಕರಣಗಳು ಎಷ್ಟು (ವಲಯವಾರು, ಕ್ಷೇತ್ರವಾರು ವಿವರ ನೀಡುವುದು);

ಇ) ಅರಣ್ಯದೊಳಗಿರುವ ಗ್ರಾಮ:ಪೋಡುಗಳನ್ನು ಅರಣ್ಯ ಗ್ರಾಮ ಅಥವಾ ಕಂದಾಯ ಗ್ರಾಮಗಳೆಂದು ಘೋಷಿಸಲಾಗಿದೆಯೆ;

ಈ) ಘೋಷಿಸದಿದ್ದಲ್ಲಿ ಕಾರಣಗಳೇನು ಹಾಗೂ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು;

ಉ) ಅರಣ್ಯದೊಳಗಿನ ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆಯೆ;

ಊ) ಕೈಗೊಂಡಿದ್ದರೆ, ಸರ್ಕಾರ ಏನು ಕ್ರಮ ಕೈಗೊಂಡಿದೆ; ಇಲ್ಲದಿದ್ದಲ್ಲಿ ಯಾವ ಕ್ರಮವನ್ನು ಕೈಗೊಳ್ಳಲಾಗುವುದು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಅರಣ್ಯ ವಿಸ್ತೀರ್ಣ ವಿಭಾಗವಾರು ಈ ಕೆಳಕಂಡಂತಿದೆ:

ಕಾವೇರಿ ವನ್ಯಜೀವಿ ವಿಭಾಗ	52,695.50 ಹೆ.
ಕೊಳ್ಳೇಗಾಲ ವಿಭಾಗ	1,22,230.50 ಹೆ.
ಚಾಮರಾಜನಗರ ವನ್ಯಜೀವಿ ವಿಭಾಗ	56,549.49 ಹೆ.
ಒಟ್ಟು	**2,31,475.49 ಹೆ.**